ಶ್ರೀಹೆಚ್.ಡಿ.ದೇವೇಗೌಡ.—ಮಾನ್ಯ ಸದಸ್ಯರು ಕಾಲಿಂಗ್ ಅಟೆನ್‌ಷನ್ ಮೋಷನ್ ಕಳುಹಿಸಿದ್ದಾರೆ. ಇದು ಕ್ರಮಬದ್ಧವಾಗಿದ್ದರೆ ತಾವು ಸಭೆಯಲ್ಲಿ ಇದನ್ನು ತರಲು ಅವಕಾಶ ಮಾಡುತ್ತೀರಿ. ಇತರ ಬಗ್ಗೆ ನಾನು ಹೇಳುತ್ತಿಲ್ಲ. ನಾನು ಬಡ್ಜೆಟ್ ಅಧಿವೇಶನದಲ್ಲಿ ಈ ದೇಶದ ಆಡಳಿತದ ಬಗ್ಗೆ ನಿರ್ದಿಷ್ಟವಾದ ಅಪಾದನೆಗಳನ್ನು ಸರಕಾರದ ಮೇಲೆ ಮಾಡಿದ್ದೆ. ಆಡಳಿತದಲ್ಲಿರುವ ಅಧಿಕಾರಿಗಳು ಸಹಕರಿಸಿದರೆ ಜನರಿಗೆ ಎಲ್ಲ ಕೆಲಸಗಳೂ ಸುಸೂತ್ರವಾಗಿ ನಡೆಯಲು ಅನುಕೂಲವಾಗುತ್ತದೆ. ಇದರಲ್ಲಿ ಮೊದಲನೆ ಸಲ ಹಣ ಮಂಜೂರಾಗಿ ಎರಡನೇ ಸಲ ವಿಚಾರಣೆ ಕೂಡ ಆಯಿತು, ಇಲ್ಲಿರುವವರು ಬಹುತೇಕ ಹರಿಜನರು. ಇದರ ಬಗ್ಗೆ ಸರಕಾರದವರು ವಿಚಾರಣೆ ಮಾಡಿ, ಮಾನ್ಯ ಅಧ್ಯಕ್ಷರು ಅವಕಾಶ ಕೊಟ್ಟರೆ ಬರುವ ಮಂಗಳವಾರ ಅಥವಾ ಬುಧವಾರ ಇದನ್ನು ಇಲ್ಲಿ ಮಂಡಿಸಬಹುದು, ಇದಕ್ಕೆ ಸರಕಾರ ವ್ಯವಸ್ಥೆ ಮಾಡುತ್ತದೆ ಎಂದು ನಂಬುತ್ತೇನೆ.

SRI H. M. CHANNABASAPPA.—I take note of what has been said by the hon. member. I shall see that the call attention notice comes up at a very early date.

ಶ್ರೀ ಕೆ. ಎಂ. ನಾಗಣ್ಣ.—ಅಧ್ಯಕ್ಷರೇ, ನಾನು ಫಿಲಂ ಕಾರ್ಪೊರೇಷನ್ ಬಗ್ಗೆ ಒಂದು ಜರೂರು ಪ್ರಶ್ನೆ ಕಳುಹಿಸಿದ್ದೆ, ಇದು ಬಹಳ ಮುಖ್ಯವಾದುದು. ಇದರ ಬಗ್ಗೆ ಸರಕಾರದ ಗಮನವನ್ನು ಸೆಳೆದರೆ ಇನ್ನೂ ಹೆಚ್ಚು ಹಣ ಬರುವ ಸಂಭವವುಂಟು ಮತ್ತು ಲಾಭವೂ ಆಗುತ್ತದೆ, ಇದನ್ನು ಸರಕಾರದ ಕಡೆಯಿಂದ ಬೇಗನೆ ತರಿಸಿಕೊಡಬೇಕು.

ಅಧ್ಯಕ್ಷರು.—ಅದನ್ನು ನೋಡಿ ನಾನು ತರಿಸಿಕೊಡುತ್ತೇನೆ.

Non-Official Resolution

Re.-Laying a new Broadgauge Railway Line between Bellary and Gulburga
(Debate contd.)

† ಬಿ. ಇ. ರಾಮಯ್ಯ (ಸಿರಗುಪ್ಪ).—ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಸಿ. ಎನ್. ಪಾಟೀಲರವರು ತಂದಿರುವ ನಿರ್ಣಯವನ್ನು ಸಮರ್ಥಿಸುತ್ತ ಕೆಲವು ವಿಚಾರಗಳನ್ನು ಸರಕಾರದ ಗಮನಕ್ಕೆ ತರಲು ಇಷ್ಟಪಡುತ್ತೇನೆ. ಇದು ಬಹು ಮುಖ್ಯವಾದ ವಿಷಯ. ಗುಲ್ಬರ್ಗಾ ಜಿಲ್ಲೆಯಿಂದ ಬಳ್ಳಾರಿ ಕಡೆಗೆ ಸರಿಯಾದ ರೈಲು ಮಾರ್ಗ ಹಾಕಬೇಕೆಂದು ಒತ್ತಾಯ ಮಾಡುತ್ತಲೇ ಬರುತ್ತಿದ್ದೇವೆ. ಹೊಸಪೇಟೆಯಲ್ಲಿ ಉಕ್ಕಿನ ಕಾರ್ಖಾನೆ ಬಂದಿರುವುದರಿಂದ ಇಷ್ಟಿಗೆ ಬ್ರಾಡ್‌ಗೇಜು ರೈಲು ಅತ್ಯವಶ್ಯಕವಾಗಿ ಆಗಬೇಕು. ಇದನ್ನು ಪ್ರತಿಯೊಬ್ಬ ಸದಸ್ಯರೂ ಒಪ್ಪುತ್ತಾರೆಂದು ಭಾವಿಸುತ್ತೇನೆ. ನಮಗೆ ಸ್ವಾತಂತ್ರ್ಯ ಬಂದು ೨೫ ವರ್ಷಗಳಾದವು. ಸುಮಾರು ೨೫ ವರ್ಷಗಳಿಂದಲೂ ಹೇಳುತ್ತಲೇ ಬರುತ್ತಿದ್ದೇವೆ. ಹೊಸ ರಾಜ್ಯ ನಮ್ಮ ದೇಶದಲ್ಲಿ ಆದರೂ ಇಲ್ಲಿ ರೈಲ್ವೆಗಳನ್ನು ಮಾಡಿರುವುದು ಬಹಳ ಕಡಿಮೆ. ಕೇಂದ್ರದಲ್ಲಿ ಕೂಡ ನಮ್ಮ ರಾಜ್ಯದ ಮೂರು ಜನರು ರೈಲ್ವೆ ಮಂತ್ರಿಗಳಾಗಿದ್ದರೂ ನಮ್ಮ ರಾಜ್ಯಕ್ಕೆ ಹೆಚ್ಚು ರೈಲ್ವೇ ಸೌಕರ್ಯಗಳನ್ನು ಮಾಡಿಕೊಡಲಿಲ್ಲ ಮತ್ತು ಹೊಸ ರಾಜ್ಯ ನಿರ್ಮಾಣವಾದ ಮೇಲೂ ನಮ್ಮ ರಾಜ್ಯದವರು ಇದರ ಕಡೆಗೆ ಹೆಚ್ಚು ಗಮನ ಕೊಟ್ಟಿಲ್ಲ ಇದರಲ್ಲಿ ಹೇಳಿರುವಂತೆ ಬಳ್ಳಾರಿಯಿಂದ ಗುಲ್ಬರ್ಗಾದವರೆಗೆ ಬ್ರಾಡ್‌ಗೇಜು ರೈಲ್ವೆಯಾದರೆ ಸುಮಾರು ನಾಲ್ಕು ಜಿಲ್ಲೆಗಳಿಗೆ ಇದರಿಂದ ಬಹು ಅನುಕೂಲವಾಗುತ್ತದೆ. ನಮ್ಮ ಮಂತ್ರಿಗಳು ಹೇಳಿರುವ ಪ್ರಕಾರ ಟ್ರಾನ್ಸ್‌ಪೋರ್ಟು ವಿಚಾರದಲ್ಲಿ ನಮ್ಮ ಭಾಗಕ್ಕೆ ರೈಲ್ವೆ ನಿರ್ಮಾಣ ಮಾಡಿದರೆ ಇದು ರೈಲ್ವೆ ಕಮ್ಯುನಿಕೇಷನ್ಸ್ ಬಹಳ ಚೀಪ್ ಆಗುತ್ತದೆಂದು ಈಗಾಗಲೇ ಈ ಸಭೆಯಲ್ಲಿ ಹೇಳಿದ್ದಾರೆ. ನಮ್ಮ ತುಂಗಭದ್ರಾ ಪ್ರೊಜೆಕ್ಟ್ ಇಲ್ಲಿ ಆಗಿರುವುದರಿಂದ ಇದರಿಂದ ಸುಮಾರು ಹತ್ತು ಲಕ್ಷ ಎಕರೆ ನೀರಾವರಿಯಾಗಲು ಸಹಾಯವಾಗಿದೆ. ಇನ್ನು ಗುಲ್ಬರ್ಗಾ ಜಿಲ್ಲೆಯ ಕಡೆ ಕೂಡ ನೀರಾವರಿ ಜಮೀನಿದೆ. ಇಲ್ಲಿ ಅಪ್ಪರ್ ಕೃಷ್ಣಾ ಯೋಜನೆ ಬರುತ್ತಿರುವುದರಿಂದ ಇಲ್ಲೂ ಕೂಡ ಹತ್ತು ಲಕ್ಷ ಎಕರೆ ನೀರಾವರಿಯಾಗಲು ಅನುಕೂಲವಾಗುತ್ತಿದೆ. ಇಷ್ಟಕ್ಕಾಗಿ ಇಲ್ಲಿಗೆ ಅನುಕೂಲವಾಗುವಂತೆ ಇನ್ನು ಮುಂದೆ ರೈಲ್ವೆ ನಿರ್ಮಾಣ ಮಾಡುವಾಗ ಬ್ರಾಡ್‌ಗೇಜು ಲೈನನ್ನು ಬಳ್ಳಾರಿಯಿಂದ ಗುಲ್ಬರ್ಗದವರೆಗೆ ಹಾಕಬೇಕು ಇದನ್ನು ಹಾಕಿದರೆ ಇಲ್ಲಿರುವ ಹಿಂದುಳಿದಪ್ರದೇಶಗಳಿಗೆ ಬಹಳ ಅನುಕೂಲವಾಗುತ್ತದೆ. ನಾವು ಈಗ ಇಪ್ಪತ್ತನೇ ಶತಮಾನದಲ್ಲಿದ್ದರೂ ಇನ್ನೂ ನಮ್ಮ ದೇಶದಲ್ಲಿ ಸಾಕಷ್ಟು ರೈಲ್ವೆ ನಿರ್ಮಾಣವಾಗಿಲ್ಲ. ಇದು ಬಹಳ ಹಿಂದುಳಿದಿದೆ. ಈಗಿನ ಯುಗದಲ್ಲಿ

ಅಮೆರಿಕದವರು ರಷ್ಯದವರು ಚಂದ್ರಲೋಕಕ್ಕೆ ಹೋಗುತ್ತಿರುವ ಇಂದಿನ ಯಾಂತ್ರಿಕ ಯುಗದಲ್ಲಿ ಹೊಸ ದಾಗಿ ಹೆಚ್ಚು ಹೆಚ್ಚು ರೈಲ್ವೆ ನಿರ್ಮಾಣ ಮಾಡುವುದು ಅಗತ್ಯವಾಗಿದೆ ಮತ್ತು ಹಿಂದುಳಿದ ಪ್ರದೇಶಗಳು ಮುಂದುವರಿಯಲು ರೈಲ್ವೆ ಮಾರ್ಗಗಳನ್ನು ಹಾಕಿ ಸಹಾಯ ಮಾಡಬೇಕು, ಇದಕ್ಕಾಗಿ ರಾಜ್ಯ ಸರಕಾರ ದವರು ಕೇಂದ್ರ ಸರಕಾರಕ್ಕೆ ಒತ್ತಾಯ ಮಾಡಿ ನಮ್ಮ ಭಾಗಕ್ಕೆ ಎಂದರೆ ಬಳ್ಳಾರಿಯಿಂದ ಗುಲ್ಬರ್ಗಾದವರೆಗೆ ರೈಲ್ವೆ ನಿರ್ಮಾಣ ಮಾಡಲು ಸಹಾಯ ಮಾಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಎಫ್. ಪಾಟೀಲ್ (ಬ್ಯಾಡಗಿ).—ಮಾನ್ಯ ಅಧ್ಯಕ್ಷರೇ, ಬಳ್ಳಾರಿಯಿಂದ ಗುಲ್ಬರ್ಗಾದವರೆಗೆ ರೈಲ್ವೆ ನಿರ್ಮಾಣ ಮಾಡಬೇಕು ಎಂದು ತಂದಿರುವ ನಿರ್ಣಯಕ್ಕೆ ನನ್ನ ಬೆಂಬಲವನ್ನು ಸೂಚಿಸುತ್ತಾ ಒಂದೆರಡು ವಿಚಾರಗಳನ್ನು ಸರಕಾರದ ಗಮನಕ್ಕೆ ಇಲ್ಲಿ ತರಬೇಕಾಗಿದೆ. ಭಾರತ ಸ್ವಾತಂತ್ರ್ಯವಾದ ಮೇಲೆ ಇಡೀ ಭಾರತದಲ್ಲೇ ರೈಲ್ವೆ ನಿರ್ಮಾಣದ ಬಗ್ಗೆ ಅಷ್ಟೇನೂ ಹೆಚ್ಚು ಪ್ರಗತಿ ಇಲ್ಲದಿದ್ದರೂ ಸ್ವಲ್ಪ ಮಟ್ಟಿಗೆ ಆಗಿದೆ. ಮೈಸೂರು ರಾಜ್ಯದಲ್ಲಿ ಇದರ ಬಗ್ಗೆ ಯಾವುದೇ ವಿಷಯಗಳನ್ನು ಗಮನಿಸಿದರೂ ಕಳೆದ ೨೫ ವರ್ಷಗಳಿಂದಲೂ ನಮ್ಮ ರಾಜ್ಯದ ಪಾಲು ಸಾಕಷ್ಟು ಬಂದಿಲ್ಲ ಎನ್ನುವುದು ನಿರ್ವಿವಾದವಾದ ಮಾತು. ಮಂಗಳೂರು ಹಾಸನ ರೈಲ್ವೆ ಒಂದನ್ನು ಬಿಟ್ಟರೆ ಬೇರೆ ಯಾವ ರೈಲು ಮಾರ್ಗಗಳೂ ನಮ್ಮ ಸ್ಟೇಟ್‌ನಲ್ಲಿ ಆಗಿಲ್ಲ. ಹಿಂದೆ ರೈಲ್ವೆ ನಿರ್ಮಾಣದ ಯೋಜನೆಗಳಿಗಾಗಿ ಒತ್ತಾಯ ಮಾಡುತ್ತಿದ್ದರೂ ಬೇರೆ ಬೇರೆ ರಾಜ್ಯ ಗಳಲ್ಲಿ ಅಲ್ಲ ಸ್ವಲ್ಪ ನಿರ್ಮಾಣವಾದರೂ ನಮ್ಮ ರಾಜ್ಯದಲ್ಲಿ ಅಷ್ಟೇನೂ ನಿರ್ಮಾಣವಾಗಿಲ್ಲ. ಜನ ಸಾಮಾನ್ಯರ ಹಿತದೃಷ್ಟಿಯಿಂದ ಆಡಳಿತ ದೃಷ್ಟಿಯಿಂದ ನಿರ್ಣಯ ಮಾಡಿದರೂ ಇದುವರೆಗೆ ಹೆಚ್ಚು ಪ್ರಗತಿ ರೈಲ್ವೆಯಲ್ಲಿ ಆಗಲಿಲ್ಲ. ಈ ದೃಷ್ಟಿಯಿಂದ ಮೈಸೂರು ರೈಲ್ವೆಗಳ ನಿರ್ಮಾಣ ಯಾವ ಯಾವ ರೀತಿಯಲ್ಲಿ ಮಾರ್ಪಾಡು ಮಾಡಬೇಕು ಎನ್ನುವುದನ್ನು ನಮ್ಮ ಸ್ಟೇಟಿನಿಂದ ಹೋದ ಮೂರು ಜನ ಮಂತ್ರಿಗಳು ಕೇಂದ್ರಕ್ಕೆ ಹೋಗಿ ದ್ದರೂ ಹೆಚ್ಚು ರೈಲ್ವೆಗಳ ನಿರ್ಮಾಣವಾಗಲಿಲ್ಲ. ನಮ್ಮ ಪ್ಲಾನಿಂಗು ಬೋರ್ಡಿನವರೂ ಕೂಡ ಪ್ಲಾನುಗಳನ್ನು ಮಾಡುವಾಗ ಅಖಂಡ ಕರ್ನಾಟಕ ನಿರ್ಮಾಣ ಯಾವ ರೀತಿ ಮಾಡಬೇಕು ಎನ್ನುವುದರ ರೂಪು ರೇಖೆಗಳನ್ನು ನೋಡಿಕೊಂಡು ನಿರ್ಮಾಣ ಮಾಡಲಿಲ್ಲ, ನಮ್ಮ ಸರಕಾರದವರು ಕೂಡ ಇದು ಕೇಂದ್ರ ಸರಕಾರಕ್ಕೆ ಸೇರಿದ್ದು ಎಂದು ಅಲಕ್ಷ್ಯ ಮಾಡುತ್ತಿದ್ದಾರೆಂದು ಸರಕಾರದ ಮೇಲೆ ಆರೋಪ ಆಗಿಂದಾಗ್ಗೆ ಬರುತ್ತಲೇ ಇದೆ. ಈ ದೃಷ್ಟಿಯಿಂದ ನಮ್ಮ ದೇಶದ ಪ್ಲಾನಿಂಗ್ ಬೋರ್ಡಿನ ಸದಸ್ಯರು ಹಾಗೂ ಮುಖ್ಯ ಮಂತ್ರಿಗಳು ಮತ್ತು ಇದಕ್ಕೆ ಸಂಬಂಧಪಟ್ಟ ಮಂತ್ರಿಗಳು ಎಲ್ಲರೂ ಸೇರಿಕೊಂಡು ನಮ್ಮ ರಾಜ್ಯದ ಸ್ಟೇಟ್ ಲೆವಲ್ ಪ್ಲಾನಿಂಗ್ ಬೋರ್ಡಿನಲ್ಲಿ ಇದರ ಬಗ್ಗೆ ವಿಚಾರ ಮಾಡುವುದು ಅತ್ಯವಶ್ಯವಾಗಿದೆ.

[Mr. Deputy Speaker in the chair]

ಇದು ಜಿಲ್ಲೆಯ ಸಮಸ್ಯೆಯಲ್ಲ, ಇಡೀ ರಾಜ್ಯದ ಸಮಸ್ಯೆ ಇದೆ. ಈಗ ಇರತಕ್ಕ ಎರಡು ಮೂರು ರೈಲುವೆ ಮಾರ್ಗಗಳನ್ನು ನೋಡಿದರೆ ನಮಗೆ ಹೆಚ್ಚಾಗಿ ಮೀಟರ್‌ಗೇಜ್ ಮಾರ್ಗವಿದೆ. ನಮ್ಮಲ್ಲಿ ಬ್ರಾಡ್‌ಗೇಜ್ ಮಾಡುವ ದೃಷ್ಟಿಯಿಂದಾಗಲೀ, ಹೊಸ ರೇಲುವೆ ಮಾರ್ಗಗಳನ್ನು ನಿರ್ಮಾಣ ಮಾಡುವ ದೃಷ್ಟಿ ಯಿಂದಾಗಲೀ ಸರ್ಕಾರ ಪೂರ್ಣವಾಗಿ ಗಮನಿಸಿ, ತಜ್ಞರ ಮತ್ತು ವಿಚಾರ ಮಾಡಿದಂಥವರ ಸಲಹೆಯನ್ನು ಪಡೆದು ಇಡೀ ಕರ್ನಾಟಕದ ದೃಷ್ಟಿಯಿಂದ ರೇಲುವೆ ಮಾರ್ಗ ಹಾಕುವ ಯೋಜನೆ ಮಾಡುವ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತಿದ್ದೇನೆ.

11-30 A. M.

ಈಗಿರತಕ್ಕ ರೇಲುವೆಗಳ ಸಾಲು ಉತ್ತರ ದಕ್ಷಿಣವಾಗಿ ಹರಿದದ್ದು ಇದೆ. ಒಳನಾಡಿನಲ್ಲಿ ಹೋಗತಕ್ಕ ಮಾರ್ಗಗಳಿಲ್ಲ. ಹೊಸಪೇಟೆ ಉಕ್ಕಿನ ದೊಡ್ಡ ಆಗರವಾದರೂ ಕೂಡ ಹೊಸಪೇಟೆ ಕಬ್ಬಿಣದ ಅದಿರು ಬಂದರಿಗೆ ಹೋಗಬೇಕಾದರೆ ಎಷ್ಟು ತೊಂದರೆ ಇದೆ ? ಆದ್ದರಿಂದ ಹೊಸ ರೇಲುವೆ ಮಾರ್ಗಗಳ ನಿರ್ಮಾಣ ಮಾಡುವಾಗ ಇದ್ದದ್ದನ್ನು ಬ್ರಾಡ್‌ಗೇಜ್ ಮಾಡುವುದಾಗಲೀ, ಹೊಸಪೇಟೆಯಿಂದ ಹುಬ್ಬಳ್ಳಿ ತನಕ ಬ್ರಾಡ್‌ಗೇಜಾಗಿ ಕನ್ವರ್ಟ್ ಮಾಡುವುದಾಗಲಿ ಆಗಿಲ್ಲ. ಮದ್ರಾಸ್ ಬಂದರಿಗೆ ಸಂಪರ್ಕವನ್ನು ಕಲ್ಪಿಸ ಬೇಕೆಂಬ ದೃಷ್ಟಿಯಿಂದ ಕೇವಲ ಗುಂತ್‌ಕಲ್ ಹೊಸಪೇಟೆ ತನಕ ಬ್ರಾಡ್‌ಗೇಜ್ ಮಾಡಿದ್ದಾದೆ ಈ ಎಲ್ಲಾ ವಿಷಯಗಳನ್ನೂ ಗಮನದಲ್ಲಿಟ್ಟುಕೊಳ್ಳುವುದು ಅತ್ಯಾವಶ್ಯಕ. ಗುಲ್ಬರ್ಗ ಬಳ್ಳಾರಿ ಮಾರ್ಗವನ್ನು ಬ್ರಾಡ್ ಗೇಜಿಗೆ ಪರಿವರ್ತನೆ ಮಾಡುವುದರಲ್ಲಿ ನನ್ನ ಅಭ್ಯಂತರವಿಲ್ಲ. ಆದರ ಜೊತೆಗೆ ನಿಪ್ಪಾಣಿ—ಕೊಲ್ಲಾಪುರ, ನಿಪ್ಪಾಣಿ, ರಾಯಗಡ, ದುಕ್ಕೇರಿ ರೋಡ್, ಜಮಖಂಡಿ, ಬಾಗಲಕೋಟೆ, ಲಿಂಗಸಗೂರು ರಾಯ ಚೂರು ರೈಲ್ವೆ ಮಾರ್ಗದ ಸಂಬಂಧದಲ್ಲಿ ಮುಂಬೈ ರಾಜ್ಯದಲ್ಲಿದ್ದಾಗಲೇ ಒಮ್ಮೆ ಪರಿಶೀಲನೆಯಾಗಿತ್ತು. ಅದನ್ನು ತೆಗೆದುಕೊಳ್ಳುವುದಲ್ಲದೆ, ಬಳ್ಳಾರಿ ಗುಲ್ಬರ್ಗ ಮಾರ್ಗದ ಜೊತೆಗೆ ಕಾರವಾರ ಹುಬ್ಬಿ ರೇಲುವೆ ಮಾರ್ಗ ನಿರ್ಮಾಣ ಮಾಡುವುದು ಅವಶ್ಯವಿದೆ, ಎಲ್ಲಕ್ಕಿಂತ ಹೆಚ್ಚಾಗಿ ಲೋಂಡದಿಂದ ಮಂಗಳೂರಿನ

(ಕೆ. ಎಚ್. ಪಾಟೀಲ್)

ವರೆಗಿ ದೊಡ್ಡದಾದ ರೇಲುವೆ ಮಾರ್ಗ ನಿರ್ಮಾಣ ಮಾಡುವುದು ಅತ್ಯವಶ್ಯ. ಅಣ್ಣ ಕೈಗಾರಿಕೆಗೆ ಬೇಕಾದಂಥ ಕಚ್ಚಾ ಮಾಲು ಬಹಳ ಮಟ್ಟಿಗೆ ಸಿಕ್ಕುತ್ತದೆ. ಲೋಂಡಾದಿಂದ ದಾಂಡೇಲಿ, ತಾಳಗುಪ್ಪ, ಅಲ್ಲಿಂದ ಮುಂದೆ ಮಂಗಳೂರಿಗೆ ಈ ಮಾರ್ಗವನ್ನು ಸೇರಿಸುವುದು ಅತ್ಯವಶ್ಯ. ರೇಲುವೆ ಮಾರ್ಗಗಳ ಬಗ್ಗೆ ವಿಚಾರಮಾಡಿರತಕ್ಕ ತಜ್ಞರು ನಮ್ಮಲ್ಲಿದ್ದಾರೆ. ಕರ್ನಾಟಕಕ್ಕೆ ಮುಂದಿನ ೫೫–೨೦ ವರ್ಷಗಳಲ್ಲಿ ಸಾವಿರ ಮೈಲು ರೇಲುವೆ ಮಾರ್ಗವಾಗಬೇಕೆಂಬ ವಿಚಾರ ಮಾಡತಕ್ಕ ತಜ್ಞರಿದ್ದಾರೆ. ಅವತ್ತೆಲ್ಲರೂ ಸಲಹೆಕೊಡಲು ಸಿದ್ಧವಾಗಿದ್ದಾರೆ. ಅವರೊಡನೆ ವಿಚಾರ ಮಾಡಬೇಕು. ಸಾಮಾನ್ಯವಾಗಿ ಇದು ಕೇಂದ್ರಕ್ಕೆ ಸೇರಿದ ಇಲಾಖೆ ಇದೆ, ನಾವು ಏನೂ ಮಾಡುವುದಕ್ಕಾಗುವುದಿಲ್ಲವೆಂದು ಸುಮ್ಮನೆ ಇದ್ದರೆ ಏನೂ ಕೆಲಸವಾಗುವುದಿಲ್ಲ.

ವಾಟರ್‌ವೇಸ್ ಸಲುವಾದ ಪ್ರಶ್ನೆ ಬಂದು ಗಂಗಾ ಮತ್ತು ಕಾವೇರಿ ನದಿಗಳನ್ನು ಸೇರಿಸುವ ಸಲಹೆ ಇದೆ. ಇದೇನೂ ಹೊಸದಲ್ಲ, ಗಂಗಾನದಿಯನ್ನು ಕಾವೇರಿ ನದಿಯೊಂದಿಗೆ ಕೂಡಿಸುವ ವಿಚಾರ ೧೮೬೦ ನಕಾಸೆ ಮಾಡಿ ಹೋಗಿರುವವರಿದ್ದಾರೆ. ಕರ್ನಾಟಕ ಪ್ರದೇಶದ ಪೂರ್ವ ದಿಕ್ಕಿನಿಂದ ಹೋಗುವಂತೆ ಅವರು ಯೋಜನೆ ಮಾಡಿದ್ದಾರೆ. ಸಾರಿಗೆ ವ್ಯವಸ್ಥೆ ಎಲ್ಲ ದಿಕ್ಕಿಯಿಂದ ನಮ್ಮ ದೇಹದಲ್ಲಿನ ರಕ್ತನಾಳಗಳಿದ್ದ ಹಾಗಿ. ಅದರಲ್ಲಿ ರೇಲುವೆ, ಗಸ್ತೆ ಮತ್ತು ನೀರಿನ ಮೇಲಿನ ಪ್ರಯಾಣ ಈ ಎಲ್ಲವನ್ನೂ ಒಟ್ಟಾರೆ ಪರಿಶೀಲನೆ ಮಾಡತಕ್ಕ ಯೋಜನೆಯನ್ನು ಸರ್ಕಾರ ತಮ್ಮ ದೃಷ್ಟಿಯಲ್ಲಿಟ್ಟುಕೊಳ್ಳುವುದು ಅತ್ಯವಶ್ಯ ಸರ್ಕಾರದವರು ಏನ ಯೋಜನೆಗಳನ್ನ ಇಟ್ಟುಕೊಂಡಿದ್ದಾರೆ ಅದನ್ನು ಸಭೆಯ ಗಮನಕ್ಕೆ ತಂದರೆ ಸೂಕ್ತವಾದ ಸಲಹೆಗಳನು ಕೊಡುವುದಕ್ಕೆ ಸದಸ್ಯರೆಲ್ಲರಿಗೂ ಕೂಡ ಸೂಕ್ತವಾದ ಸಮಯ ಸಿಕ್ಕುತ್ತದೆ. ರೇಲುವೆಗಳು ಪ್ರಾಮುಖ್ಯವಾದುದರಿಂದ ಅದನ್ನು ಪರೀಶೀಲನೆಗೆ ತೆಗೆದುಕೊಳ್ಳುವುದಕ್ಕೆ ಈ ರರಾವನ್ನು ಪಾಸ್ ಮಾಡುವುದಲ್ಲದೆ ಇನ್ನೂ ಹೆಚ್ಚು ಹೆಚ್ಚು ಕ್ರಮತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕೆಂದು ಅಭಿಪ್ರಾಯ ಪಡುತ್ತೇನೆ

† ಶ್ರೀ ಟಿ. ಆರ್ ಶಾಮಣ್ಣ (ಕೋಟೆ)—ಮಾನ್ಯ ಸಭಾಧ್ಯಕ್ಷರೇ, ಈಗ ಬಳ್ಳಾರಿಯಿಂದ ಗುಲ್ಬರ್ಗ ಬ್ರಾಡ್‌ಗೇಜ್ ರೈಲ್ವೆಲೈನ್ ಹಾಕಬೇಕು ಎನ್ನುವುದರ ಬಗ್ಗೆ ನನ್ನ ಬೆಂಬಲವನ್ನು ಸೂಚಿಸುತ್ತೇನೆ. ನಮ್ಮ ಕರ್ನಾಟಕದ ದೌರ್ಭಾಗ್ಯವೆಂದು ಕಾಣಿಸುತ್ತದೆ, ನಾಲ್ಕು ಜನ ರೈಲ್ವೆ ಮಂತ್ರಿಗಳು ಕರ್ನಾಟಕದಿಂದಲೇ ಚುನಾಯಿತರಾದವರು. ದಿವಂಗತ ದಾಸಪ್ಪನವರು, ಶ್ರೀಮಾನ್ ಪೂಜಾಪ್ಪ, ಶ್ರೀಮಾನ್ ಹನುಮಂತಯ್ಯ ಮತ್ತು ಈಗ ಸಚಿವರಾಗಿರುವ ಶ್ರೀಮಾನ್ ಟಿ. ಎ. ಪೈ ಅವರು. ಇವರೆಲ್ಲರೂ ಕೂಡ ಕರ್ನಾಟಕಕ್ಕೆ ಸೇರಿದ ಗಣ್ಯ ವ್ಯಕ್ತಿಗಳು, ಮುಖ್ಯಮಂತ್ರಿಗಳಾಗಿದ್ದಂತ. ಶ್ರೀಮಾನ್ ಕೆ. ಎಫ್. ಪಾಟೀಲರು ಹೇಳಿದ ಹಾಗೆ ಹಾಸನ ಮಂಗಳೂರುಮಾರ್ಗವನ್ನು ಬಿಟ್ಟರೆ ಬೇರೆ ಯಾವ ಮಾರ್ಗವನ್ನೂ ತೆಗೆದುಕೊಳ್ಳತಕ್ಕ ಖಚಿತವಾದ ತೀರ್ಮಾನವಾಗಿಲ್ಲ. ಕೆಲಸಕ್ಕೆ ಬಾರದೆ ಇದ್ದಂಥ ಸೇಲಂ ಭುಗಳೂರು ಮಾರ್ಗವನ್ನು ಮಾತ್ರ ಹಾಕಿದ್ದಾರೆ. ಇದನ್ನು ಬಿಟ್ಟರೆ ಹೆಚ್ಚು ಉಪಯುಕ್ತವಾದ ಮತ್ತು ಪ್ರಯೋಜನಕಾರಿಯಾದ ಮಾರ್ಗಗಳನ್ನು ಹಾಕುವ ಕಾರ್ಯಕ್ರಮವನ್ನು ತೆಗೆದುಕೊಳ್ಳದೆ ಇರುವುದು ಬಹಳ ಶೋಚನೀಯವಾದ ವಿಚಾರ. ಮಾನ್ಯ ಸದಸ್ಯರು ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ರಾಜ್ಯಕ್ಕೆ ಕಡೇ ಪಕ್ಷ ಒಂದು ಸಾವಿರ ಮೈಲಿ ದೂರ ಹೊಸ ರೈಲ್ವೆ ಮಾರ್ಗವನ್ನು ಹಾಕಬೇಕು ಎನ್ನುವುದರ ಬಗ್ಗೆ ಅನೇಕ ತಜ್ಞರು ಸಲಹೆಗಳನ್ನು ಕೊಟ್ಟಿದ್ದಾರೆ. ಈಗ ಈ ರಾಜ್ಯದ ಹೆಚ್ಚು ಸಾಮಾನು ಸಾಗಾಣಿಕೆ ಲಾರಿ ಮುಖಾಂತರವಾಗುತ್ತಿದೆ. ಲಾರಿಗಳ ಮೂಲಕ ಸಾಗಾಣಿಕೆ ಮಾಡತಕ್ಕದ್ದು ಹೆಚ್ಚು ದುಬಾರಿಯಾದದ್ದು ಮತ್ತು ಬಹಳ ದೂರಪರತಕ್ಕ ಮತ್ತು ಬೆಲೆಯುಳ್ಳ ಕಡಮೆ ಇರೆತಕ್ಕ ಸಾಮಾನುಗಳನ್ನು ಲಾರಿಗಳಲ್ಲಿ ತೆಗೆದುಕೊಂಡು ಹೋಗುವುದಕ್ಕೆ ಸಾಧ್ಯವಾಗುತ್ತಿಲ್ಲ. ಆದುದರಿಂದ ಒಂದು ದೇಶದ ವ್ಯಾಪಾರ ಮತ್ತು ಒಂದು ದೇಶದ ಕಾರ್ಖಾನೆಗಳು ಮತ್ತು ಆ ದೇಶ ಅಭಿವೃದ್ಧಿಯಾಗಬೇಕಾದರೆ ರೈಲ್ವೆ ಸಂಚಾರ ಮತ್ತು ನೀರಿನ ಮೇಲಿನಸಂಚಾರ ಹೆಚ್ಚು ಮಾಡುವುದಕ್ಕೆ ಅವಕಾಶ ಮಾಡಬೇಕು. ಈ ಸರ್ವಗ್ರವಾದ ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕೆ ರಾಜ್ಯ ಸರ್ಕಾರ ಸಾಕಾದಷ್ಟು ಗಮನ ಕೊಡದೆ ಇರುವುದು ಶೋಚನೀಯವಾದ ವಿಚಾರ. ಕೇಂದ್ರದಲ್ಲಿ ನಮ್ಮವರೇ ಮಂತ್ರಿಗಳಾಗಿದ್ದಾಗ ರಾಜ್ಯ ಸರ್ಕಾರ ಅವರ ಮೇಲೆ ಒತ್ತಾಯ ಮಾಡಿ ರಾಜ್ಯಕ್ಕೆ ಬೇಕಾದಷ್ಟು ರೈಲ್ವೆ ಮಾರ್ಗವನ್ನು ಒದಗಿಸಿಕೊಳ್ಳದೆ ಇರುವುದು ಶೋಚನೀಯ.

ಶ್ರೀಮಾನ್ ಕೆ. ಎಫ್. ಪಾಟೀಲರು ಹೇಳಿದ ಹಾಗೆ ಹುಬ್ಬಳ್ಳಿ ಕಾರವಾರ ಮಾರ್ಗ ಅಗತ್ಯವಾಗಿ ಆಗಬೇಕಾಗಿದೆ. ಉತ್ತರ ಕನ್ನಡ ಜಿಲ್ಲೆ ಬಹಳ ಹಿಂದುಳಿದ ಜಿಲ್ಲೆ. ಅಲ್ಲಿರುವ ನೈತಿಕ ಸಂಪತ್ತನ್ನು ಉಪಯೋಗಿಸಿಕೊಳ್ಳುವುದಕ್ಕೆ, ಆ ಪ್ರದೇಶಗಳು ಅಭಿವೃದ್ಧಿಯಾಗುವುದಕ್ಕೆ ಹುಬ್ಬಿ ಕಾರವಾರ ರೈಲ್ವೆ ಮಾರ್ಗ ಅಗತ್ಯವಾಗಿ ಆಗಬೇಕಾಗಿದೆ. ಲೋಂಡಾದಿಂದ ದಾಂಡೇಲಿ ಮುಕಾಂತರ ಹೋಗುವಂಥ ಪಶ್ಚಿಮ ಕರಾವಳಿ ರೈಲ್ವೆ ಮಾರ್ಗ ಅತಿ ಅಗತ್ಯವಾಗಿ ಆಗಬೇಕಾಗಿದೆ. ತಾಳಗುಪ್ಪದಿಂದ ಮುಂದುವರಿಸಿ ವೆಸ್ಟ್

ಕೋಸ್ಟ್ ರೈಲ್ವೆಗೆ ಸೇರಿಸತಕ್ಕ ಮಾರ್ಗವನ್ನು ಅತಿ ಅಗತ್ಯವಾಗಿ ತೆಗೆದುಕೊಳ್ಳಬೇಕಾಗಿದೆ. ಸಮಗ್ರವಾದ ಯೋಜನೆಯನ್ನು ಮಾಡಿ ಶೀಘ್ರವಾಗಿ ರೈಲ್ವೆ ಸಂಪರ್ಕ ಹೆಚ್ಚುವಂತೆ ಮಾಡುವುದು ಅತಿ ಅಗತ್ಯವಾಗಿದೆ. ಬಳ್ಳಾರಿಯಿಂದ ಗುಲ್ಬರ್ಗವರೆಗೆ ಬ್ರಾಡ್‌ಗೇಜ್ ಮಾರ್ಗವನ್ನು ಹಾಕುವುದರ ಜೊತೆಗೆ ಸಮರ್ಪಕವಾದ ತೀರ್ಮಾನವನ್ನು ತೆಗೆದುಕೊಂಡು ಈ ರಾಜ್ಯದ ರೈಲ್ವೆ ಸಂಪರ್ಕ ಹೆಚ್ಚಾಗಿ ಬೆಳೆಯುವುದಕ್ಕೆ ತಿಂವ್ರ ಕ್ರಮ ಸರ್ಕಾರ ತೆಗೆದುಕೊಳ್ಳಬೇಕೆಂದು ಒತ್ತಾಯ ಪಡಿಸುತ್ತೇನೆ. ಮುಖ್ಯವಾಗಿ ಹುಬ್ಬಳ್ಳಿ ಕಾರವಾರ ಮಾರ್ಗ ಅತಿ ಅಗತ್ಯವಾಗಿ ಬೇಕಾಗಿದೆ. ಹಾಗಿಲ್ಲದೆ ಹೋದರೆ ನಮ್ಮ ಖನಿಜ ಸಂಪತ್ತು, ವನಸಂಪತ್ತು ಯಾವುದನ್ನೂ ಅಭಿವೃದ್ಧಿ ಪಡಿಸಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಸಾಧ್ಯವಾದಷ್ಟೂ ಇವುಗಳನ್ನು ಅಭಿವೃದ್ಧಿ ಪಡಿಸಿ ಕೊಳ್ಳಬೇಕಾದರೆ ಅತಿ ಅಗತ್ಯವಾಗಿ ರೈಲ್ವೆ ಸಂಪರ್ಕ ಬೇಕಾಗಿದೆ. ಆದರ ಬಗ್ಗೆ ಸರ್ಕಾರವವರು ಹೆಚ್ಚಿನ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದರ ಜೊತೆಗೆ ಕೇಂದ್ರದಲ್ಲಿ ಹೆಚ್ಚಿನ ಒತ್ತಾಯವನ್ನು ತರಬೇಕೆಂದು ಹೇಳಿ ಈ ನಿರ್ಣಯವನ್ನು ಸ್ವಾಗತಿಸುತ್ತೇನೆ.

†ಶ್ರೀ ಕೊಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಸನ್ಮಾನ್ಯ ಉಪಾಧ್ಯಕ್ಷರೇ, ಸನ್ಮಾನ್ಯ ಸದಸ್ಯರಾದ ಸಿ. ಎನ್. ಪಾಟೀಲರು ತಂದಿರತಕ್ಕ ನಿರ್ಣಯವನ್ನು ನಾನು ಸ್ವಾಗತಿಸುತ್ತೇನೆ. ಈ ಸಂದರ್ಭದಲ್ಲಿ ಎರಡು ಮಾತನ್ನು ಮಾತ್ರ ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಮಾನ್ಯ ಸದಸ್ಯರಾದ ಟಿ. ಆರ್. ಶಾಮಣ್ಣನವರು ಹೇಳಿದಂತೆ ಕೇಂದ್ರ ಸರ್ಕಾರದಲ್ಲಿ ನಮ್ಮ ರಾಜ್ಯದವರೇ ಅಂಧಿನಿಂದ ಇಂದಿನವರೆಗೂ ರೈಲ್ವೆ ಮಂತ್ರಿಗಳಾಗಿ ಬಂದಿದ್ದಾರೆ. ನಾಲ್ಕು ಜನ ಮಂತ್ರಿಗಳು ಕೂಡ ಕೇಂದ್ರದಲ್ಲಿ ನಮ್ಮರಾಜ್ಯದವರು. ಆದರೆ ಒಂದು ವಿಷಾದದ ಸಂಗತಿ ಎಂದರೆ ನಮ್ಮಲ್ಲಿ ರೈಲ್ವೆವಿಚಾರದಲ್ಲಿ ಹೆಚ್ಚು ಸಂಪರ್ಕ ಸಾಧನೆಗಳನ್ನು ಕಲ್ಪಿಸುವುದರಲ್ಲಿ ಯಾವ ಒಂದು ಪ್ರಗತಿಯೂ ಆಗಿಲ್ಲ.

ಕೇವಲ ಸರ್ವೆ ಮಾಡುವುದು ಅಲ್ಲಿಗೇ ಕೈಬಿಡುವುದು. ಮತ್ತೆ ಮಾಡುತ್ತಾರೆ. ಅಲ್ಲಿಗೇ ಕೈ ಬಿಡುತ್ತಾರೆ. ಈ ರೀತಿಯಾಗಿ ಕೇಂದ್ರ ಸರ್ಕಾರ ಉದ್ದಕ್ಕೂ ಬರೀ ಮಾತಿನ ರೈಲು ಬಿಡುತ್ತಿದ್ದಾರೆಯೇ ಹೊರತು ನಮ್ಮ ರಾಜ್ಯದಲ್ಲಿ ಮತ್ತೇನೂ ಮಾಡುತ್ತಾ ಇಲ್ಲ. ನಮ್ಮ ಸೌತ್ ಇಂಡಿಯಾ ತೆಗೆದುಕೊಂಡರೆ ಸ್ವಾತಂತ್ರ್ಯ ಬಂದನಂತರ ಹೆಚ್ಚು ರೈಲ್ವೆ ಲೈನನ್ನು ಮಾಡಿಲ್ಲ. ಬ್ರಿಟಿಷರ ಕಾಲದಲ್ಲಿ ಏನು ರೈಲ್ವೆ ಮಾರ್ಗಗಳು ಇತ್ತೋ ಅದಕ್ಕಿಂತ ಹೆಚ್ಚು ನಮ್ಮ ಭಾಗದಲ್ಲಿ ಎಲ್ಲೂ ಹೆಚ್ಚು ರೈಲುಗಳನ್ನು ಬಿಡಲಿಲ್ಲ ಎಂದು ನಾನು ವಿಷಾದದಿಂದ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ನಮ್ಮ ಪರಿಸ್ಥಿತಿ ಏನಾಗಿದೆ ಎಂದರೆ ಆಲ್ಲಿ ನಮ್ಮ ರಾಜ್ಯದವರು ಮಂತ್ರಿಗಳು ಇದ್ದರೂ ಕೂಡ " ದೀಪದ ಕೆಳಗೆ ಕತ್ತಲು " ಅಂದಹಾಗೆ ಇದೆ. ನಮ್ಮ ರಾಜ್ಯದಲ್ಲಿ ಏನು ಸಂಪರ್ಕಸಾಧನಗಳು, ಎಷ್ಟು ರೈಲ್ವೆ ಮಾರ್ಗಗಳು ಹೆಚ್ಚಾಗಬೇಕಾಗಿತ್ತೋ ಅಷ್ಟು ಆಗಿಲ್ಲ. ಈಗ ಸಾಗರದಿಂದ ತಾಳಗುಪ್ಪದವರೆಗೆ ಇರತಕ್ಕಂಥ ರೈಲನ್ನು ನಿಲ್ಲಿಸಬೇಕೆಂದು ಯೋಚನೆ ಮಾಡುವುದು ಸರಿಯಲ್ಲ. ಅದನ್ನು ಹೋನಾವರದವರೆಗೂ ವಿಸ್ತರಿಸಬೇಕು. ಒಂದು ಸಾರಿ ಮುಖ್ಯ ಮಂತ್ರಿಗಳು ಹೇಳಿದ್ದನ್ನು ಕೇಳಿದ್ದೇನೆ. ಈಗ ಇರುವುದನ್ನು ಹೆಚ್ಚು ಮಾಡುವುದರ ಬದಲು ಮೊಟಕು ಮಾಡುವುದಕ್ಕೆ ಪ್ರಯತ್ನ ಮಾಡಬಾರದು. ಅದುದರಿಂದ ನಾವಾದರೂ ಹೇಳುವುದು ಏನೆಂದರೆ ನಮ್ಮ ರಾಜ್ಯದಲ್ಲಿ ಎಲ್ಲಿ ಅವಶ್ಯಕವಾದ ಸಂಪರ್ಕಸಾಧನಗಳು ಇರುತ್ತದೆ ಅಲ್ಲಿ ಮಾಡಬೇಕು. ಉದಾಹರಣೆಗೆ ಹೇಳುವುದಾದರೆ ಈ ನಿರ್ಣಯದಲ್ಲಿರತಕ್ಕಂಥ ಒಂದು ಮಾರ್ಗ ಮತ್ತು ಹಾಗೆಯೇ ತಾಳಗುಪ್ಪದಿಂದ ದಾಂಡೇಲಿ ಹಾಗೆಯೇ ವೆಸ್ಟ್‌ಕೋಸ್ಟ್ ತಲಪಿ ಹಾಗೆಯೇ ಕೇರಳಕ್ಕೆ ಹೋಗತಕ್ಕಂಥಾ ರೈಲು ಮಾರ್ಗವನ್ನು ಮಾಡಬೇಕು. ಏತಕ್ಕೆಂದರೆ ನಮ್ಮ ರಾಜ್ಯದಲ್ಲಿ ಬೇಕಾದಷ್ಟು ಮ್ಯಾಂಗನೀಸ್ ಓರ್ ಸಿಕ್ಕುತ್ತದೆ. ಸಂಪರ್ಕ ಸಾಧನ ಇಲ್ಲದೆ ಇದನ್ನು ಬೇರೆ ದೇಶಕ್ಕೆ ಸಾಗಿಸಲು ತೊಂದರೆಯಾಗುವುದರಿಂದ ಈ ರೈಲು ಮಾರ್ಗವನ್ನು ಹಾಕಿಕೊಟ್ಟರೆ ನಮ್ಮ ರಾಜ್ಯದಲ್ಲಿರುವ ಕೈಗಾರಿಕೆಗಳನ್ನು ಬೆಳೆಸುವುದಕ್ಕೆ ಅನುಕೂಲವಾಗುತ್ತದೆ. ಆದರೆ ಕೇಂದ್ರ ಸರ್ಕಾರದವರು ನಮ್ಮ ದಕ್ಷಿಣ ಭಾಗಕ್ಕೆ ರೈಲು ಮಾರ್ಗಗಳನ್ನು ಹಾಕಲು ಛಲ ಏತಕ್ಕೆ ಮಲತಾಯಿ ಧೋರಣೆ ಮಾಡುತ್ತಾರೋ ಗೊತ್ತಿಲ್ಲ. ಆದರೆ ವಿಶಾಲ ಮನೋಭಾವ ಹೆಸರಿನಲ್ಲಿ ಸಮಾಜವಾದದ ಹೆಸರಿನಲ್ಲಿ ನಮ್ಮ ದಕ್ಷಿಣ ಭಾರತದ ಸಂಪರ್ಕಸಾಧನಗಳು ಹಿಂದುಳಿದಿದೆ ಅದರಲ್ಲೂ ನಮ್ಮ ಕರ್ನಾಟಕವು ಸಂಪೂರ್ಣವಾಗಿ ಹಿಂದುಳಿದಿದೆ. ಈವೊತ್ತು ಮಾನ್ಯ ಟಿ ಎ.ಪೈ. ಅವರು ಕೇಂದ್ರ ಸರ್ಕಾರದ ಮಂತ್ರಿಗಳಾಗಿದ್ದಾರೆ. ಈಗ ಅವರು ಮಂಗಳೂರು ಮತ್ತು ಬಾಂಬೆಗೆ ರೈಲು ಮಾರ್ಗವನ್ನು ಹಾಕಬೇಕೆನ್ನುವ ಯೋಜನೆ ಮಾಡುತ್ತಿದ್ದಾರೆಂದು ನಾನು ಕೇಳಿದ್ದೇನೆ. ಹಿಂದೆ ಇದ್ದವರು ಸಹ ಇದೇರೀತಿ ಯೋಜನೆ ಮಾಡಿದ್ದರು ಎಂದು ಕೇಳಿದ್ದೇನೆ ಆದ್ದರಿಂದ ನಿರ್ಣಯದಲ್ಲಿ ತಂದಿರತಕ್ಕಂಥ ಮಾರ್ಗವನ್ನು ಬಳ್ಳಾರಿಯಿಂದ ಗುಲ್ಬರ್ಗಾಕ್ಕೆ ಬ್ರಾಡ್‌ಗೇಜ್ ರೈಲು ಮಾರ್ಗವನ್ನು ಕಲ್ಪಿಸುವುದು ಅತಿ ಮುಖ್ಯ. ಇದು ಕಾರ್ಯಗತವಾಗಬೇಕು. ಕೇವಲ ಮಾತಿನಲ್ಲಿ ಆಡುವುದನ್ನು ಬಿಟ್ಟು ನಮ್ಮ ಸರ್ಕಾರದವರು ಕೇಂದ್ರ ಸರ್ಕಾರದವರ ಹತ್ತಿರ ಹೋಗಿ ಗಟ್ಟಿಯಾಗಿ ಕುಳಿತುಕೊಂಡು ಈ ಕೆಲಸ ಆಗಲೇ ಬೇಕು ಎಂದು ಒತ್ತಾಯ ಮಾಡಬೇಕು. ತಮಿಳುನಾಡು ಸರ್ಕಾರ, ಕೇರಳ ಸರ್ಕಾರ, ಮತ್ತು ಆಂಧ್ರ ಸರ್ಕಾರ ಮತ್ತು

(ಶ್ರೀ ಕೋಣಂದೂರು ಲಿಂಗಪ್ಪ)

ಅಕ್ಕಪಕ್ಕದ ಸರ್ಕಾರಗಳು ಹೇಗೆ ಅವರು ತಮ್ಮ ಬುದ್ಧಿಯನ್ನು ಉಪಯೋಗಿಸಿ ಕೇಂದ್ರ ಸರ್ಕಾರದ ಮೇಲೆ ಪ್ರಭಾವ ಬೀರಿ ಯಾವರೀತಿ ಒತ್ತಾಯ ತರುತ್ತಿದ್ದಾರೋ ಅದೇರೀತಿ ನಮ್ಮ ಸರ್ಕಾರದವರ ರೂಪ ಕೂಡ ಅಷ್ಟೇ ಪ್ರಭಾವ ಬೀರಿ, ಅಷ್ಟೇ ಒತ್ತಾಯ ಮಾಡಿ ಇದನ್ನು ಕಾರ್ಯಗತ ಮಾಡಬೇಕು. ಆದರೆ ಕೇಂದ್ರ ಸರ್ಕಾರದ ಮೇಲೆ ಪ್ರಭಾವ ಬೀರುವುದಕ್ಕೆ ನಮ್ಮ ಸರ್ಕಾರದವರು ನಿಶ್ಶಕ್ತರಾಗಿದ್ದಾರೆ ಎಂದು ನನಗೆ ಅನ್ನಿಸುತ್ತದೆ. ಇದು ೨೫ ವರ್ಷದಿಂದಲೂ ನಡೆದು ಬಂದ ಕಥೆ ನಾವು ನೋಡಿದ್ದೂ. ಆದುದರಿಂದ ಈವೊತ್ತಾದರೂ ನಮ್ಮ ಸರ್ಕಾರ ಏನು ಮಾಡಬೇಕು ಎಂದರೆ ನಮ್ಮ ರಾಜ್ಯದಲ್ಲಿ ರೈಲ್ವೆ ಸಂಪರ್ಕವನ್ನು ಕಲ್ಪಿಸುವುದರ ಬಗ್ಗೆ ಕೇಂದ್ರ ಸರ್ಕಾರದ ಮೇಲೆ ಎಷ್ಟರಮಟ್ಟಿಗೆ ಒತ್ತಾಯ, ಪ್ರಭಾವವನ್ನು ಬೀರಬೇಕೋ ಅಷ್ಟರಮಟ್ಟಿಗೆ ಬೀರಿ ಈ ಕೆಲಸಕಾರ್ಯಗಳನ್ನು ತೆಗೆದುಕೊಳ್ಳುವ ಹಾಗೆ ಮಾಡಬೇಕು. ಆದೂ ಇಲ್ಲದೇ ಹೋದರೆ ಬೇರೆ ರಾಜ್ಯ ಸರ್ಕಾರಗಳು ಮಾಡುವ ರೀತಿ ನೀವು ಅವರಿಗೆ ಬೆದರಿಕೆ ಹಾಕಬೇಕು, ಅದೂ ಆಗದೇ ಹೋದರೆ ಆಗಾಗ್ಗೆ ಇದರ ಬಗ್ಗೆ ಬುಸುಗುಟ್ಟಬೇಕು. ಏತಕ್ಕೆಂದರೆ ನಮ್ಮ ರಾಜ್ಯ ಸರ್ಕಾರದವರೂ ಕೂಡ ಕೇಂದ್ರ ಸರ್ಕಾರದ ಮೇಲೆ ಪ್ರಭಾವ ಬೀರಿದ್ದಾರೆ ಎಂದು ಅಷ್ಟನ್ನಾದರೂ ತಿಳಿದುಕೊಳ್ಳಬೇಕು. ಇದರಲ್ಲಿ ತಮ್ಮ ಶಕ್ತಿ ಏನೂ ಇಲ್ಲ ಉತ್ತರ ಕರ್ನಾಟಕ ಸಂಪರ್ಕದ ಪ್ರಗತಿಗಾಗಿ ಈ ರೈಲು ಮಾರ್ಗವನ್ನು ಹಾಕಿಸಿ ಕೊಡುವ ಕೆಲಸವನ್ನು ಮಾಡಿಕೊಡಬೇಕು. ವಿಶಾಲ ಮನೋಭಾವ ಅನ್ನುವ ಹೆಸರಿನಲ್ಲಿ ಮತ್ತು ಸಮಾಜವಾದದ ಹೆಸರಿನಲ್ಲಿ ಕೂತುಕೊಳ್ಳಬಾರದು ಎಂದು ಹೇಳುತ್ತೇನೆ. ಆದುದರಿಂದ ನಮ್ಮ ಸರ್ಕಾರ ಈ ಒಂದು ಮಾರ್ಗವನ್ನು ಬಳ್ಳಾರಿಯಿಂದ ಗುಲ್ಬರ್ಗಾಕ್ಕೆ ಬ್ರಾಡ್‌ಗೇಜ್ ಹಾಕುವ ಅವಶ್ಯಕವಾದ ರೈಲು ಮಾರ್ಗವನ್ನು ಆಗುದೂಡುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಹೇಳಿ ಈ ಮಾನ್ಯ ಸಭೆಯ ಮೂಲಕ ಅವರು ತಂದಿರುವ ನಿರ್ಣಯವನ್ನು ಅಂಗೀಕಾರ ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

† ಶ್ರೀ ಎಚ್.ಜಿ. ಚನ್ನಪ್ಪ (ಮಾಗಡಿ).—ಸನ್ಮಾನ್ಯ ಸಭಾಪತಿಗಳೇ, ರೈಲ್ವೆ ರಸ್ತೆಗಳ ನಿರ್ಮಾಣ ವಿಷಯದಲ್ಲಿ ತಂದಿರತಕ್ಕಂಥ ಈ ಮಂಸೂದೆಯನ್ನು ನಾನು ಅನುಮೋದಿಸುತ್ತಾ, ಈ ಬಗ್ಗೆ ಕೆಲವು ವಿಷಯಗಳನ್ನು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ನಮ್ಮ ಸ್ನೇಹಿತರು ಹೇಳಿದಂತೆ ಹಿಂದೆ ಅಂದರೆ ಬ್ರಿಟಿಷರ ಕಾಲದಲ್ಲಿ ನಮ್ಮ ದಕ್ಷಿಣ ಭಾಗದಲ್ಲಿ ಯಾವ ರೈಲು ಮಾರ್ಗ ಹಾಕಿದ್ದರೋ ಅಂದಿನ ಯಾವ ಯಾವ ಭಾಗದಲ್ಲಿ ನ್ಯಾರೋಗೇಜ್ ಮೀಟರ್ ಗೇಜ್ ಬ್ರಾಡ್ ಗೇಜ್ ಲೈನುಗಳನ್ನು ಹಾಕಿದ್ದರೋ ಅದೇ ಮಟ್ಟದಲ್ಲಿಯೇ ಇಂದೂ ನಡೆದುಕೊಂಡು ಹೋಗುತ್ತಿದೆ. ಇದು ಸೆಂಟ್ರಲ್ ರೈಲ್ವೆ ಬೋರ್ಡ್‌ಗೆ ಸೇರಿಕೊಂಡು ಮೇಲೆ ಇದು ಹೆಚ್ಚು ಪ್ರಗತಿಯನ್ನು ಸಾಧಿಸಬಹುದು ಎಂದು ತಿಳಿದುಕೊಂಡಿದ್ದೆವು. ಆದರೆ ಇಲ್ಲಿಯ ತನಕವೂ ಅದು ಕನಸು ಆಗಿದೆಯೇ ಹೊರತು ನನಸಾಗುವ ಕಾಲ ಬಂದಿಲ್ಲ. ಈವೊತ್ತು ಉತ್ತರ ಪ್ರದೇಶದಲ್ಲಿ ಹೋಗಿ ನೋಡಿದರೆ ಅಲ್ಲಿ ವೇಗವಾಗಿ ಹೋಗುವ ಟ್ರೈನ್ ನಿರ್ಮಾಣವಾಗಿವೆ. ದುರ್ದೈವವಶಾತ್ ನಮ್ಮ ರಾಜ್ಯದಲ್ಲಿ ಈ ರೈಲುಗಳ ವೇಗದಲ್ಲೂ ಸುಧಾರಣೆಯಾಗಿಲ್ಲ. ನಾವು ಮೈಸೂರಿನಿಂದ ಬೆಂಗಳೂರಿಗೆ ಹೋಗಬೇಕಾದರೆ ಅರ್ಧ ದಿವಸ ಆಗುತ್ತದೆ. ಏತಕ್ಕೆಂದರೆ ರೈಲ್ವೆ ಪ್ರಯಾಣ ಒಹಳ ವಿಳಂಬವಾಗುವುದರಿಂದ ಹೆಚ್ಚು ಜನ ಟೂರಿಸ್ಟ್ ಬಸ್ಸಿನಲ್ಲೇ ಪ್ರಯಾಣ ಮಾಡುತ್ತಿದ್ದಾರೆ. ಈ ರೈಲಿನ ಪ್ರಯಾಣದ ವಿಳಂಬದಿಂದಲೇ ಟೂರಿಸ್ಟ್ ಬಸ್ಸುಗಳಂ ಹೆಚ್ಚಾಗುವುದಕ್ಕೆ ಕಾರಣ. ಆದುದರಿಂದ ಮೈಸೂರು ಬೆಂಗಳೂರು ತನಕ ಎಲೆಕ್ಟ್ರಿಕ್ ಟ್ರೈನ್ ಹಾಕಬೇಕೆಂದು ಕೇಳುತ್ತಿದ್ದೇವೆ. ಆದರೂ ಅದು ಇನ್ನೂ ಕಾರ್ಯಗತ ಆಗುತ್ತಾ ಇಲ್ಲ. ಈಗಾಗಲೇ ೩-೪ ಜನ ಮಂತ್ರಿಗಳು ನಮ್ಮ ರಾಜ್ಯದಿಂದ ಹೋಗಿರತಕ್ಕಂಥಾವರೇ ಕೆಂದ್ರ ಸರ್ಕಾರದಲ್ಲಿ ರೈಲ್ವೆ ಸಚಿವರಾಗಿದ್ದರು. ದುರ್ದೈವವಶಾತ್ ಅವರು ಇದನ್ನು ಕಾರ್ಯಗತ ಮಾಡಬೇಕು ಎನ್ನುವಾಗಲೇ ಆಗಾಗ್ಗೆ ಇದರಲ್ಲಿ ಬದಲಾವಣೆ ಆಗುತ್ತಿದೆ. ಇದರ ಉದ್ದೇಶ ಏನು ಎನ್ನುವುದನ್ನು ನಾವು ಅರ್ಥ ಮಾಡಿಕೊಳ್ಳದೇ ಇರತಕ್ಕಂಥ ವಿಷಯವಾಗಿದೆ. ಈವೊತ್ತಿನ ದಿವಸ ದೇಶ ಒಂದು ಪ್ರಗತಿ ಆಗಬೇಕಾದರೆ ಹೆಚ್ಚಿನ ರೈಲ್ವೆ ಮಾರ್ಗ ಆಗಬೇಕು, ಅದರ ಸಂಪರ್ಕ ಜಾಸ್ತಿ ಆಗಬೇಕು. ಈಗ ಏನೋ ಮಂಗಳೂರು-ಹಾಸನ ರೈಲುಮಾರ್ಗವನ್ನು ನಿರ್ಮಾಣ ಮಾಡುತ್ತಿದ್ದಾರೆ. ಹಾಗೆಯೇ ಮಂಗಳೂರು-ಡೆಲ್ಲಿಯವರೆಗೆ ವಿಸ್ತರಿಸುವುದಾದರೆ ಸುತ್ತಮುತ್ತ ಜಿಲ್ಲೆಯವರು ಬಂದರುಗಳಿಗೆ ಸಾಮಾನುಗಳನ್ನು ಸಾಗಿಸುವುದಕ್ಕೆ ಸುಲಭವಾಗುತ್ತದೆ. ಮತ್ತು ಬಾಂಬೆಗೆ ಹೋಗುವುದಕ್ಕೂ ಅನುಕೂಲವಾಗುತ್ತದೆ. ಮತ್ತು ಈಗ ಎಲ್ಲೆಲ್ಲಿ ನ್ಯಾರೋ ಗೇಜ್, ಮೀಟರ್ ಗೇಜ್, ಬ್ರಾಡ್ ಗೇಜ್ ಇದೋ ಅದನ್ನು ಒದಲಾವಣೆ ಮಾಡಿ ಹೆಚ್ಚಿನ ಒಂದು ಸೌಲಭ್ಯವನ್ನು ಒದಗಿಸಿಕೊಡಬೇಕು ಎಂದು ಈ ನಿರ್ಣಯದ ಮೂಲಕ ಕೇಂದ್ರ ಸರ್ಕಾರದವರನ್ನು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮತ್ತು ತಮ್ಮನ್ನು ನಾನು ಕೇಳಿಕೊಳ್ಳುತ್ತೇನೆ. ನಮ್ಮ ರಾಜ್ಯದ ರೈಲ್ವೆ ಅಭಿವೃದ್ಧಿ ಬಗ್ಗೆ ಕೇಂದ್ರ ಸರ್ಕಾರದವರನ್ನು ಒತ್ತಾಯ ಪಡಿಸಬೇಕು ಎಂದು. ಉದಾಹರಣೆಗೆ ಈವೊತ್ತು ಮೈಸೂರು-ಬೆಂಗಳೂರು ರೈಲ್ವೆ ಲೈನ್ ತೆಗೆದುಕೊಂಡರೆ ಇಂಗ್ಲೀಷರ ಕಾಲದಲ್ಲಿ ಯಾವರೀತಿ ಇತ್ತೋ ಅದೇರೀತಿಯಲ್ಲಿ ಪ್ರಯಾಣ ಮಾಡುತ್ತಿದ್ದೇವೆ. ಈವೊತ್ತಿನ ದಿವಸ ಎಲ್ಲರೂ ಚಂದ್ರಲೋಕಕ್ಕೆ

ಹೋಗುವ ಕಾಲದಲ್ಲಿ ಈ ರೈಲ್ವೆ ಲೈನ್‌ನಲ್ಲೇ ಗುದ್ದಾಡುತ್ತಿದೇವೆ. ಆದುದರಿಂದ ಈ ರೈಲ್ವೆ ಲೈನ್‌ವೆಚ್ಚ ಜಾಗ್ರತೆ ಅಭಿವೃದ್ಧಿ ಪಡಿಸದೇ ಹೋದರೆ ನಾವು ಎಷ್ಟು ಹಿಂದುಳಿದಿದ್ದೇವೆ ಎನ್ನುವುದನ್ನು ಯೋಚನೆ ಮಾಡಬೇಕಾಗುತ್ತದೆ. ಮಂತ್ರಿ ಅವರಿಗೆ ಇನ್ನು ಯಾವರೀತಿಯಲ್ಲಿ ಹೇಳಿಕೊಳ್ಳಬೇಕೋ ಗೊತ್ತಿಲ್ಲ. ಮಂತ್ರಿ ಈವೊತ್ತಿನ ದಿವಸ ಬೆಂಗಳೂರು-ಡೆಲ್ಲಿಗೆ ನೇರವಾಗಿ ರೈಲ್ವೆ ಪ್ರಯಾಣ ಮಾಡುವ ಸೌಕರ್ಯ ದೊರಕಬೇಕು. ಈಗಾಗಲೇ ಗುದ್ದಲಿ ಪೂಜೆ ಆಗಿದೆ. ಆದರೆ ಇದು ಯಾವತ್ತು ಕಾರ್ಯಗತ ವಾಗುತ್ತದೋ ಗೊತ್ತಿಲ್ಲ. ನಮ್ಮ ಕಾಲಕ್ಕೆ ಆಗುತ್ತದೋ ಇಲ್ಲವೋ ಗೊತ್ತಿಲ್ಲ, ನಾವು ಆ ಲೈನನ್ನು ನೋಡುತ್ತೇವೋ ಇಲ್ಲವೋ, ಅಥವಾ ನಮ್ಮ ಮಕ್ಕಳು ನೋಡುತ್ತಾರೋ ಇಲ್ಲವೋ ಗೋತ್ತಿಲ್ಲ. ಯಾವ ಯಾವ ಕೆಲಸ ಕಾರ್ಯಗಳು ನಮ್ಮ ರಾಜ್ಯದಲ್ಲಿ ಆಗಬೇಕೋ ಅದನ್ನು ತೀವ್ರಗತಿಯಲ್ಲಿ ಅದಷ್ಟು ಬೇಗ ಕಾರ್ಯರೂಪಕ್ಕೆ ತರುವುದಕ್ಕೆ ಒತ್ತಾಯಪೂರ್ವಕವಾದ ನಿರ್ಣಯವನ್ನು ಕಳುಹಿಸಿ. ಈಗ ಬೆಂಗಳೂರಿನಿಂದ ಡೆಲ್ಲಿಗೆ ಹೋಗಬೇಕಾದರೆ ಮದ್ರಾಸ್‌ಗೆ ಹೋಗಿ ಅಲ್ಲಿಂದ ಬಾಂಬೆಗೆ ಹೋಗಿ ಅಲ್ಲಿಂದ ಎಕ್ಸ್‌ಪ್ರೆಸ್ ರೈಲ್‌ನ್ನು ಹಿಡಿದುಕೊಂಡು ಹೋಗಬೇಕು ಅದು ತಪ್ಪಬೇಕು. ದೇಶದ ರಾಜಧಾನಿಯೂಗಿರತಕ್ಕಂಥ ಡೆಲ್ಲಿಗೆ ನೇರವಾಗಿ ಹೋಗುವ ಸೌಲಭ್ಯವನ್ನು ಒದಗಿಸುವುದಕ್ಕೆ ಒತ್ತಾಯಪೂರ್ವಕವಾಗಿ ಈ ನಿರ್ಣಯದ ಮೂಲಕ ಕಳುಹಿಸಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇಷ್ಟನ್ನು ಹೇಳಿ ಈ ಒಂದು ಸಂದರ್ಭದಲ್ಲಿ ನಮ್ಮ ರೈಲ್ವೆ ಮಾರ್ಗಗಳು ಏನು ಇವೆ ಹೆಚ್ಚಿನ ಮಟ್ಟದಲ್ಲಿ ಆಗಬೇಕು ಮತ್ತು ಅಭಿವೃದ್ಧಿ ಆಗಬೇಕು ಎಂದು ಈ ನಿರ್ಣಯಕ್ಕೆ ಬೆಂಬಲ ಕೊಡುತ್ತಾ ಅಧ್ಯಕ್ಷರು ಒಂದೆರಡು ನಿಮಿಷ ಮಾತನಾಡುವುದಕ್ಕೆ ಅವಕಾಶ ಕೊಟ್ಟದಕ್ಕೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಚ್. ಎಂ. ಚೆನ್ನಬಸಪ್ಪ :- ಮಾನ್ಯ ಉಪಾಧ್ಯಕ್ಷರೇ, ನಮ್ಮ ರಾಜ್ಯದಲ್ಲಿ ರೈಲ್ವೆ ರಸ್ತೆ ಬೆಳವಣಿಗೆ ಬಹುಮಟ್ಟಿಗೆ ಕಡಿಮೆ ಇದೆ, ಅದು ಹೆಚ್ಚು ಆಗಬೇಕು, ಹಾಗೆ ಆಗದ ಹೊರತು ಆರ್ಥಿಕ, ಸಾಮಾಜಿಕ ಪ್ರಗತಿ ಮುಂದುವರಿಯುವುದು ಕಷ್ಟವಾಗುತ್ತದೆನ್ನುವ ಅಭಿಪ್ರಾಯ ಏನು ವ್ಯಕ್ತಪಡಿಸಿದ್ದಾರೆ ಅದರ ಬಗ್ಗೆ ಸರ್ಕಾರ ಕೂಡ ಧ್ವನಿಗೂಡಿಸುತ್ತದೆ,

ಶ್ರೀ ವಿ. ಎನ್. ಪಾಟೀಲ್:- ಗುಲ್ಬರ್ಗ ಭಾಗಕ್ಕೆ ಏನು ಹೇಳಿದ್ದೀರಿ ಅದರಲ್ಲಿ ಬೀದರ್ ಟು ಗುಲ್ಬರ್ಗ ಸೇರಿಸಿ ಎಂದು ಹೇಳುತ್ತೇನೆ.

ಶ್ರೀ ಎಚ್. ಎಂ. ಚೆನ್ನಬಸಪ್ಪ :- ಮೈಸೂರು ರಾಜ್ಯದಲ್ಲಿ 2757 ಕಿಲೋ ಮೀಟರ್ಸ್ ರೈಲ್ವೆ ರಸ್ತೆ ಇದೆ. ಭಾರತದ ಸರಾಸರಿ ಒಂದುಸಾವಿರ ಸ್ಕ್ವೇರ್ ಕಿಲೋಮೀಟರ್‌ಗೆ 18 ಮೈಲು ರೈಲ್ವೆ ರಸ್ತೆಇದೆ. ನಮ್ಮದು 14.4 ಭಾರತದ ಸರಾಸರಿಯೂಗಿದೆ. ಇದು ಬಹುಮಟ್ಟಿಗೆ ಕೆಳ ಮಟ್ಟದಲ್ಲಿ ಇದೆಯೆಂದು ನಮ್ಮ ನಿಮ್ಮ ಎಲ್ಲರ ಮನಸ್ಸನ್ನು ನೋಯಿಸತಕ್ಕ ವಿಚಾರವಾಗಿದೆ. ಇತ್ತೀಚೆಗೆ ಏನು ಕೆಲಸ ಆಗಿಲ್ಲ ಎಂದು ಹೇಳುವುದು ಸರಿಯಲ್ಲ. ಈಗ 25 ವರ್ಷಗಳಿಂದ ಈಚೆಗೆ ಅಲ್ಪಸ್ವಲ್ಪ ಕೆಲಸ ಆಗಿದೆ. ಆದರೆ ಅದು ಕಡಿಮೆ ಪ್ರಮಾಣದ್ದು ಎಂದು ಅನ್ನುವುದನ್ನು ನಾವು ಒಪ್ಪತಕ್ಕದ್ದು ಆಗಿದೆ. ಈಗ ಈ ಒಂದು ವಿಷಯದಲ್ಲಿ ನಾವು ಎಲ್ಲರೂ ಕೂಡ ಸೇರಿ ಕಾರ್ಯ ಮಾಡಬೇಕಾದುದು ಇದೆ. ಭಾರತ ಸರ್ಕಾರದ ಮೇಲೆ ಒತ್ತಾಯ ತಂದು ಅದಷ್ಟು ಹೆಚ್ಚಿನ ಪ್ರಮಾಣದಲ್ಲಿ ರೈಲ್ವೆ ಮಾರ್ಗವನ್ನು ಹೆಚ್ಚಿಸಬೇಕು. ಆದರ ಬಗ್ಗೆ ಆಗಲೇ 1965ನೇ ಇಸವಿಯಲ್ಲಿ ಕೆಳಗೆ ಕಂಡಂತೆ ರೈಲ್ವೆ ಲೈನುಗಳ ಬಗ್ಗೆ ಒತ್ತಾಯ ಮಾಡಿದ್ದೇವೆ. Hubli-Hospet line broadguaging; Hubli-Goa Broadguaging; construction of new lines between Karwar and Hubli, new broadguage line from Karwar to Hubli connecting Kottur with Harihar and Mudabidre via Shimoga, Talgoppa to Korwar via Sirsi-Gadagwadi line. 4-1-65ರಲ್ಲಿ ಮೈಸೂರು ರಾಜ್ಯ ಸರ್ಕಾರ ಭಾರತ ಸರ್ಕಾರದೊಡನೆ ಸಂಪರ್ಕ ಬೆಳೆಸಿ ಇದನ್ನು ಒತ್ತಾಯ ಪಡಿಸಿದೆ. ಈಚೆಗೆ ಮೈಸೂರು ಸರ್ಕಾರ ಈ ಕೆಳಕಂಡಂತ ಲೈನ್ಸ್‌ಗಳ ವಿಷಯದಲ್ಲಿ ಒತ್ತಾಯಪಡಿಸಿದೆ. Conversion of existing meter- guage line to broad guage line from Bangalore to Mysore; construction of broad guage line from Hubli to Karwar; constuction of Harihar-Kottur line; Yeshwnthapur-Chitradurga line; broabguaging Hassn-Mangalore line ; construction of Raidurg Chitradurga line : construction of new railway line between Talagoppa and Honnavar.

ಈಗ ನಿರ್ಣಯ ತಂದಿರತಕ್ಕದು ಬಳಾರಿ-ಗುಲ್ಬರ್ಗಾಕ್ಕೆ ಸಂಬಂಧಪಟ್ಟಿದೆ.

(ಶ್ರೀ ಎಚ್. ಎಂ. ಚನ್ನಬಸಪ್ಪ)

New broad-guage Railway line to connect Bellary with Gulbarga via Siruguppa, Sindhanoor, Lingsugur, Shahapur and Surpur.

ಎಂದು ಏನಿದೆ ಇದರ ಬಗ್ಗೆ ನಮ್ಮ ಸಹಾನುಭೂತಿ ಇದೆ. ಬಹುಶ : ಈ ತಿಂಗಳು ರೈಲ್ವೆ ಮಂತ್ರಿಗಳು ಇಲ್ಲಿಗೆ ಬರಲಿದ್ದಾರೆ. ಹಿಂದಿನ ಸರ್ಕಾರ ಯಾವಯಾವ ಲೈನುಗಳನ್ನು ಒತ್ತಾಯ ಪಡಿಸುತ್ತಿದ್ದರು, ಯಾವುದು ಒತ್ತಾಯ ಮಾಡಿದ್ದಾರೆ, ಇಂದು ಯಾವುದು ನಿರ್ಣಯ ತಂದಿದ್ದಾರೆ ಎಲ್ಲವನ್ನೂ ಕೂಡ ಸಮಗ್ರವಾಗಿ ಪರಿಶೀಲಿಸಿ ಒಂದು ಆರ್ಡರ್ ಆಫ್ ಪ್ರಯೊರಿಟಿ ಫಿಕ್ಸ್ ಮಾಡಿ ಭಾರತಸರ್ಕಾರದ ಮೇಲೆ ಒತ್ತಾಯಮಾಡಿ ನಮ್ಮ ಮೈಸೂರು ರಾಜ್ಯದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಅತ್ಯಗತ್ಯವಾದಂತಹ ರೈಲ್ವೆ ಲೈನುಗಳನ್ನು ನಿರ್ಮಿಸುವುದು, ಹಾಗೂ ಬ್ರಾಡ್‌ಗೇಜ್ ಆಗಿ ಪರಿವರ್ತಿಸುವುದರ ಬಗ್ಗೆ ಒತ್ತಾಯ ಮಾಡಬೇಕೆಂದು ಯೋಚಿಸಿದ್ದೇವೆ, ಸರ್ಕಾರ ಈ ನಿರ್ಣಯದ ಮೂಲ ತತ್ವವನ್ನು ಒಪ್ಪಿತ್ತದೆ. ಇಂತಹ ಮಾರ್ಗದಲ್ಲಿ ಹೋಗಬೇಕು ಎಂದು ಸೂಚನೆ ಮಾಡಿದ್ದೀರಿ. ಅದನ್ನು ಸರ್ಕಾರ ಪರಿಶೀಲನೆಮಾಡಿ ಮೂಲಭೂತವಾಗಿ ಬಳ್ಳಾರಿ ಗುಲ್ಬರ್ಗ ರೈಲ್ವೆ ಲೈನು ಆಗಬೇಕು, ಬೀದರ್ ಮಾರ್ಗ ಆಗಬೇಕು ಅದನ್ನು ಗಮನದಲ್ಲಿಟ್ಟುಕೊಂಡು ಭಾರತ ಸರ್ಕಾರ ಸರ್ಕಾರವನ್ನು ಈ ಬಗ್ಗೆ ಒತ್ತಾಪಡಿಸಿ ನಮಗೆ ಎಷ್ಟು ಅತ್ಯವಶ್ಯ ಪ್ರಮಾಣದಲ್ಲಿ ಬೇಕು ಅದನ್ನು ಆದಷ್ಟು ಬೇಗ ಮಾಡಿಕೊಡಿ ಎಂದು ಒತ್ತಾಯಪಡಿಸುವುದಕ್ಕೆ. ಸರ್ಕಾರ ಸಿದ್ದವಿದೆ. ಇಷ್ಟು ಆಸ್ವಾಸನೆಯನ್ನು ಸರ್ಕಾರ ಕೊಡುತ್ತದೆ. ಈ ದೃಷ್ಟಿಯಿಂದ ಶ್ರೀ ಸಿ. ಎನ್. ಪಾಟೀಲರು ಇದನು ವಾಪಸ್ ತೆಗೆದುಕ್ಕೊಬೇಕು ಎಂದು ಕೋರುತ್ತೇನೆ.

ಶ್ರೀ ಸಿ. ಎನ್. ಪಾಟೀಲ್ : ಮಾನ್ಯ ಮಂತ್ರಿಗಳ ಆಶ್ವಾಸನೆಯ ಹಿನ್ನೆರೆಗೆ ರೆಸಲ್ಯೂಷನ್ ವಾಪಸ್ ತೆಗೆದುಕೊಂಡಿದ್ದೇನೆ.

MR. DEPUTY SPEAKER :- Is it the pleasure of the House that leave be granted to the member to withdraw the resolution ?

Hon. MEMBERS :- Yes.

The resolution waw, by leave, withdrawn.

(ii) Re. Provision for payment of appropriate remunration or honerarium to members of BCC,

MR. DEPUTY SPEAKR :- Now we will take up the next resolution by hon. Member Sri Shamanna.

SRI. T. R. SHAMANNA (FORT) :- I move :

"This Assembly recommends to the Government to take steps to amend the Bangalore City Municipal Corporation Act by makin suitable provisions to give appropriate remuneration or honorarium to the City Fathers who have great responsibilities to discharge in the interest of providing better amenities to the people of Bangalore City."

MR. DEPUTY SPEAKER :- Motion moved :

"That this Assembly recommend to the Government to take steps to amend the Bangalore City Municipal Corporation Act by making suitable provisions to give appropriate remuneration or honorarium to the City Fathers who have great responsibilities to discharge in the interest of providing better amenities to the people of Bangalore City."